ಅನುಬಂಧ–1

ವಿಧಾನಸಭೆ ಸದಸ್ಯರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3478ರ ಲಗತ್ತು

ಕುಡಿಯುವ ನೀರಿನ ಯೋಜನೆಗಳು

ಭೌತಿಕ ಪ್ರಗತಿ

ಕ್ರಸಂ.	ತಾಲ್ಲೂಕು	ರಾಜ್ಯವಲಯ		ಕೇಂದ್ರವಲಯ	
		ಮುಂದುವರೆದ ಕಾಮಗಾರಿಗಳು	ಹೊಸ ಕಾಮಗಾರಿಗಳು	ಮುಂದುವರೆದ ಕಾಮಗಾರಿಗಳು	ಹೊಸ ಕಾಮಗಾರಿಗಳು
	ಕಾರವಾರ ವಿಭಾಗ				
1	ಕಾರವಾರ	14	09	35	20
2	ಅಂಕೋಲ	18	04	31	09
3	ಕುಮಟಾ	12	09	35	07
4	ಹೊನ್ನಾವರ	19	–	38	18
5	ಭಟ್ಕಳ್	12	01	35	05
6	ಜೋಯ್ಡ	05	02	19	18
	ಒಟ್ಟು	80	25	193	77

ಕ್ರ.ಸಂ.	ತಾಲ್ಲೂಕು	ರಾಜ್ಯವಲಯ		ಕೇಂದ್ರವಲಯ	
		ಮುಂದುವರೆದ ಕಾಮಗಾರಿಗಳು	ಹೊಸ ಕಾಮಗಾರಿಗಳು	ಮುಂದುವರೆದ ಕಾಮಗಾರಿಗಳು	ಹೊಸ ಕಾಮಗಾರಿಗಳು
	ಶಿರಸಿ ವಿಭಾಗ				
1	ಶಿರಸಿ	09	–	33	16
2	ಸಿದ್ದಾಪುರ	06	03	20	28
3	ಯಲ್ಲಾಪುರ	04	12	21	09
4	ಮುಂಡಗೋಡ್	10	03	15	22
5	ಹಳಿಯಾಳ	12	–	27	05
	ಒಟ್ಟು	41	18	116	80
	ಕಾರವಾರ + ಶಿರಸಿ ವಿಭಾಗ ಒಟ್ಟು ಕಾಮಗಾರಿಗಳು	121	43	309	157

ಆರ್ಥಿಕ ಪ್ರಗತಿ:

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವಲಯ	ಬಿಡುಗಡೆಯಾದ ಹಣ	ವೆಚ್ಚ (ದುರಸ್ತಿ ಹಾಗೂ ನಿರ್ವಹಣೆ) ಸೇರಿದಂತೆ)
1	ರಾಜ್ಯ	270.48	230.21
2	ಕೇಂದ್ರ	463.51	282.80
	ಒಟ್ಟು	733.99	513.01

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಕುಡಿಯುವ ನೀರಿನ ಯೋಜನೆಗಳಿಗೆ ಬಿಡುಗಡೆ ಮಾಡಿರತಕ್ಕಂಥ ಹಣದಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನತಕ್ಕಂಥ ವಿವರಗಳನ್ನು ನಾನು ಕೇಳಿದ್ದೇನೆ. ಇದಕ್ಕೆ ಎಷ್ಟು ಹಣ ಖರ್ಚಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ರಾಜ್ಯವಲಯದಲ್ಲಿ ಇನ್ನು 121 ಕಾಮಗಾರಿಗಳು ಮುಂದುವರೆಯುವುದು ಇದೆ. ಹಾಗೆಯೇ ಕೇಂದ್ರ ವಲಯದಲ್ಲಿ 309 ಮುಂದುವರಿದಂಥ ಕಾಮಗಾರಿಗಳು ಇವೆ. ಈ ಎಲ್ಲಾ ಕಾಮಗಾರಿಗಳನ್ನು ಯಾವಾಗ ಮುಗಿಸುವುದಕ್ಕೆ ಯೋಜನೆ ಮಾಡಲಾಗಿದೆ ಎನ್ನತಕ್ಕಂಥದು ಮುಖ್ಯ. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ 6 ವಿಧಾನ ಸಭಾ ಕ್ಷೇತ್ರವಿದ್ದರೂ ಕೂಡ ನಮ್ಮಲ್ಲಿ 11 ತಾಲ್ಲೂಕುಗಳಿವೆ. ಇವತ್ತಿನ ದಿವಸ ನಮ್ಮ ಕಡೆ ನೀರಿನ ಅಭಾವ ಬಹಳ ದೊಡ್ಡ ಪ್ರಮಾಣದಲ್ಲಿದೆ. ಮತ್ತೆ ನಮ್ಮಲ್ಲಿ ಎಲ್ಲಿಗೆ ಹೋದರೂ ಕೂಡ ನೀರಿನ ಹಾಹಾಕಾರ ಇದೆ. ಇವತ್ತಿನ ದಿವಸ ಇಲ್ಲಿ ನೀರಿಲ್ಲ. ಇವತ್ತಿನ ದಿವಸ ನಮ್ಮ ಕಡೆ 100 ಇಂಚ್ ಪ್ರಮಾಣದಲ್ಲಿ ಮಳೆಯಾದರೂ ಕೂಡ ಕುಡಿಯುವುದಕ್ಕೆ ನೀರಿಲ್ಲ. ಇದರಿಂದ ಬಹಳ ದೊಡ್ಡ ತೊಂದರೆಯಾಗಿದೆ. ಮತ್ತೆ ಕೋಸ್ಟಲ್ ಲೈನ್‌ನಲ್ಲಿ ಬಾವಿ ತೆಗೆದರೆ ಅಲ್ಲಿ ಉಪ್ಪು ನೀರು ಬರುತ್ತದೆ. ಆದ್ದರಿಂದ, ಇಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥಿತವಾಗಿ ಆಗಬೇಕು. ಮತ್ತೆ ಈ ಕೆಲಸ ಕಾರ್ಯಗಳಿಗೆ ಸುಮಾರು 1 ಕೋಟಿ ರೂಪಾಯಿಗಳ ಅಗತ್ಯತೆ ಕೂಡ ಇದೆ. ಈ ಮಾಹಿತಿಯನ್ನು ಜಿಲ್ಲಾ ಪಂಚಾಯತ್‌ನಿಂದ ಪಡೆದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಎರಡು ವಿಷಯಕ್ಕೆ ಸಂಬಂಧಪಟ್ಟಂತೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೊದಲನೆಯದು ಏನೆಂದರೆ, ಈ ರಾಜ್ಯ ಮತ್ತು ಕೇಂದ್ರವಲಯದ ಕಾಮಗಾರಿಗಳು ಒಟ್ಟು ಸುಮಾರು 430 ಕಾಮಗಾರಿಗಳಾಗುತ್ತವೆ. ಹೊಸದಾಗಿ ಸುಮಾರು 200 ಕಾಮಗಾರಿಗಳನ್ನು ತೆಗೆದುಕೊಂಡಿರತಕ್ಕಂಥದು ಇದೆ. ಆದರೆ ಇದು ಬೇರೆಯಾಗಿದೆ. ಆದರೆ, ಇರತಕ್ಕಂಥ ಹಳೆಯ ಕಾಮಗಾರಿಗಳನ್ನು ಯಾವ ಕಾಲ ಮಿತಿಯಲ್ಲಿ ಮುಗಿಸುತ್ತೀರಿ? ಮತ್ತೆ ನಮ್ಮ ಜಿಲ್ಲೆಯ 11 ತಾಲ್ಲೂಕುಗಳಲ್ಲಿ ನೀರಿನ ಅಭಾವ ಬಹಳ ದೊಡ್ಡ ಪ್ರಮಾಣದಲ್ಲಿರುವುದರಿಂದ ಕುಡಿಯುವ ನೀರಿನ ಯೋಜನೆಗಳಿಗೋಸ್ಕರ ಇನ್ನು 1 ಕೋಟಿ ರೂಪಾಯಿಗಳಷ್ಟು ಅಗತ್ಯತೆ ಇದೆ ಎನ್ನತಕ್ಕಂಥ ಮಾಹಿತಿಗಳನ್ನು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ, ಈ ಹಣವನ್ನು ಯಾವಾಗ ಬಿಡುಗಡೆಗೊಳಿಸುತ್ತೀರಿ ಎನ್ನತಕ್ಕಂಥ ವಿವರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ। ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಮತ್ತು ಕೇಂದ್ರ ವಲಯಗಳ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಮತ್ತೆ ಹೊಸದಾಗಿ 150 ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ನೀರಿನ ತೀವ್ರ ಅಭಾವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಹೊಸ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಜಿಲ್ಲಾ ಪರಿಷತ್‌ನಲ್ಲಿ ಈಗಾಗಲೇ 2 ಕೋಟಿ ರೂಪಾಯಿ ಇದೆ. ಇದನ್ನು ಮಾನ್ಯ ವಿಶ್ವೇಶ್ವರ ಹೆಗಡೆಯವರು ವಿಚಾರ ಕೂಡ ಮಾಡಿದ್ದಾರೆ. ವಸ್ತು ಸ್ಥಿತಿ ಆಧರಿಸಿ ಇರತಕ್ಕಂಥ 2 ಕೋಟಿ ರೂಪಾಯಿ ಮುಗಿದ ಮೇಲೆ ಮತ್ತೆ ಅಗತ್ಯ ಬಿದ್ದರೆ ಮತ್ತೆ ಹಣ ಮಂಜೂರು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಹಾಗೆಯೇ ಉತ್ತರ ಕನ್ನಡ ಭಾಗದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೋಸ್ಕರ ಟಾಸ್ಕ್‌ಫೋರ್ಸ್ ರಚನೆ ಮಾಡಲಾಗಿದೆ. ಮತ್ತೆ ಇದಕ್ಕೆ ಹಣಕಾಸಿನ ತೊಂದರೆ ಇದ್ದರೆ ಇದಕ್ಕೆ ಎಷ್ಟು ಹಣ ಬೇಕಾದರೂ ಕೊಡುವುದಕ್ಕೆ ನಾವು ಸಿದ್ದರಿದ್ದೇವೆಂದು ಈಗಾಗಲೇ ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಇದು ರಾಜ್ಯ ಹಾಗೂ ಕೇಂದ್ರ ವಲಯಗಳ ಯೋಜನೆಗಳನ್ನು ಬಳಸಿಕೊಂಡು ನೀರಿನ ಅಭಾವ ಅಲ್ಲಿ ಆಗದ ರೀತಿಯಲ್ಲಿ ಸಹಾಯವಾಗುವುದಕ್ಕೆ ಪ್ರಯತ್ನ ಮಾಡುತ್ತೇವೆ. ರಾಜ್ಯ ಮತ್ತು ಕೇಂದ್ರ ವಲಯಗಳ ಹೊಸ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ: ಮಾನ್ಯ ಉಪಾಧ್ಯಕ್ಷರೆ, ನಾವು ಒಂದು ರೀತಿಯ ವಿಚಿತ್ರವಾದ ಸನ್ನಿವೇಶದಲ್ಲಿದ್ದೇವೆ. ಇವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ನೋಡಿದರೆ ಅಲ್ಲಿ ಹಣ

ಇದೆ. ಆದರೆ, ವಾಸ್ತವಿಕವಾಗಿ ಅಲ್ಲಿ ಕೆಲಸ ಮಾಡುವುದಕ್ಕೆ ಹಣ ಕೇಳಿದರೆ ಅಲ್ಲಿ ಹಣ ಇಲ್ಲ. ನನ್ನ ಕ್ಷೇತ್ರವಾದ ಅಂಕೋಲದಲ್ಲಿರತಕ್ಕಂಥ ಒಂದು ಯೋಜನೆ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 65 ಲಕ್ಷ ರೂಪಾಯಿ ವೆಚ್ಚದಲ್ಲಿ ಬಬ್ರುವಾಡ ಕುಡಿಯುವ ನೀರಿನ ಯೋಜನೆಯೊಂದು ಪ್ರಾರಂಭವಾಯಿತು. ಇದಕ್ಕೆ ಇನ್ನು 30 ಲಕ್ಷ ರೂಪಾಯಿ ಕೊಡತಕ್ಕಂಥದ್ದು ಬಾಕಿ ಇದೆ. ಈಗ ಅಲ್ಲಿ ಕೆಲಸ ಪ್ರಗತಿಯಲ್ಲಿ ಇಲ್ಲ. ಏಕೆಂದರೆ ಸಂಬಂಧಪಟ್ಟಂಥ ಗುತ್ತಿಗೆದಾರರಿಗೆ ಇನ್ನು 30 ಲಕ್ಷ ರೂಪಾಯಿ ಬಾಕಿ ಕೊಡಬೇಕಾಗಿದೆ. ಆದ್ದರಿಂದ, ಅಲ್ಲಿ ಕೆಲಸ ಮುಂದಕ್ಕೆ ಹೋಗುತ್ತಿಲ್ಲ. ಆದ್ದರಿಂದ, ಈ ಬಬ್ರುವಾಡ ಕುಡಿಯುವ ನೀರಿನ ಯೋಜನೆಗೆ ಇನ್ನು 30 ಲಕ್ಷ ರೂಪಾಯಿ ಕೊಡಬೇಕಾಗಿದೆ. ಅದರೆ, ಜಿಲ್ಲಾ ಪಂಚಾಯತ್‌ನಲ್ಲಿ ಎರಡು ಕೋಟಿ ರೂಪಾಯಿ ಇನ್ನು ಇದೆ ಎಂದು ತಾವು ಹೇಳುತ್ತಿದ್ದೀರಿ. ಆದರೆ, ಇದಕ್ಕೆ ಹಣ ಕೊಡದೆ ಇರುವುದರಿಂದ ಸದರಿ ಕೆಲಸ ಪ್ರಗತಿಯಾಗುತ್ತಿಲ್ಲ. ಮತ್ತೆ ಕುಡಿಯುವ ನೀರಿನ ತೊಂದರೆ ಇದುವರೆಗೂ ತಪ್ಪಲಿಲ್ಲ. ಒಂದು ಕಡೆ ಹಣ ಇದೆ ಎಂದು ಹೇಳುತ್ತಾರೆ. ಆದರೆ ಲಗುತ್ತಿರುವ ಕೆಲಸಕ್ಕೆ ಹಣ ಕೊಡುತ್ತಿಲ್ಲ. ಈ ರೀತಿಯಾದ ದ್ವಂದ್ವ ಏಕಿದೆ ಎಂದು ಮಾನ್ಯ ಸಚಿವರು ಹೇಳಬೇಕು. ಮತ್ತೆ ಇನ್ನೊಂದು ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇಲ್ಲಿಂದ ಹೋಗತಕ್ಕಂಥ ಹಣಕ್ಕೆ ಅನೇಕ ಕ್ರಿಯಾ ಯೋಜನೆಗಳನ್ನು ಜಿಲ್ಲಾ ಪಂಚಾಯತ್‌ನಲ್ಲಿ ಮಾಡಬೇಕಾಗುತ್ತದೆ. ಆದರೆ, ಜಿಲ್ಲಾ ಪಂಚಾಯತ್ ಸದಸ್ಯರು ಯಾವ ಕಾರಣಕ್ಕಾಗಿಯೇ ಅಥವಾ ಯಾವ್ಯಾವ ಆಸಕ್ತಿ ಇಟ್ಟುಕೊಂಡಿದ್ದಾರೆಯೋ ಗೊತ್ತಿಲ್ಲ. ಆದರೆ ಕ್ರಿಯಾ ಯೋಜನೆ ಮಾಡುವುದಕ್ಕೆ ಸಾಕಷ್ಟು ವಿಳಂಬ ಮಾಡುತ್ತಾರೆ. ಈ ರೀತಿಯಾಗಿ ವಿಳಂಬ ಮಾಡಿದ ಪರಿಣಾಮವಾಗಿ ನಿಗದಿತ ಅವಧಿಯಲ್ಲಿ ಅವುಗಳು ಅನುಷ್ಠಾನಗೊಳ್ಳುವುದಿಲ್ಲ. ಆದ್ದರಿಂದ, ಇಂಥವುಗಳನ್ನು ತಕ್ಷಣವೇ ಅನುಷ್ಠಾನಗೊಳಿಸುವುದಕ್ಕೆ ತಾವು ಕಟ್ಟೆಚರಿಕೆಯ ಸೂಚನೆಯನ್ನು ಕೊಡಬೇಕು. ಇವತ್ತಿನ ದಿವಸ ಜಿಲ್ಲಾ ಪಂಚಾಯತ್ ಏನೇನು ನಡೆಯುತ್ತದೆ ಎನ್ನತಕ್ಕಂಥದನ್ನು ಬಿಗಿಯಾಗಿ ಹಿಡಿದು ನೋಡದಿದ್ದರೆ ಅಲ್ಲಿನ ಎಲ್ಲಾ ಆಡಳಿತ ವ್ಯವಸ್ಥೆಯು ಹಾಳಾಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ, ಈ ರೀತಿಯಾದ ಯೋಜನೆಗಳಿಗೋಸ್ಕರ ಜಿಲ್ಲಾ ಪಂಚಾಯತ್‌ಗೆ ಕೊಟ್ಟಿರತಕ್ಕಂಥ ಹಣವನ್ನು ಕಟ್ಟೆಚ್ಚರಿಕೆಯಲ್ಲಿ ಮತ್ತು ಬಿಗುವಾಗಿ ಅದನ್ನು ಅನುಷ್ಠಾನಗೊಳಿಸುವುದಕ್ಕೆ ತಾವೇನು ಸೂಚನೆ ಕೊಡುತ್ತೀರಿ? ಹಾಗೆಯೇ, ಅಲ್ಲಿ ಹಣ ಇದೆ ಎಂದು ತಾವು ಈಗಾಗಲೇ ಹೇಳಿದ್ದೀರಿ. ಆದ್ದರಿಂದ, ಅಲ್ಲಿ ಆಗುತ್ತಿರುವ ಕಾಮಗಾರಿಗಳಿಗೆ ಹಣವನ್ನು ಏಕೆ ಬಿಡುಗಡೆ ಮಾಡುತ್ತಿಲ್ಲ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಡಾ। ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಯೋಜನೆಗೆ ಹಣ ಬಿಡುಗಡೆಯಾಗುತ್ತದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 11 ತಾಲ್ಲೂಕುಗಳು ಬರುತ್ತವೆ. ಈ ಎಲ್ಲಾ ತಾಲ್ಲೂಕುಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ 11 ತಾಲ್ಲೂಕುಗಳಲ್ಲಿ ಮಾನ್ಯ ಸದಸ್ಯರ ಕ್ಷೇತ್ರ ಕೂಡ ಸೇರಿಕೊಳ್ಳುತ್ತದೆ. ಹಾಗೆಯೇ, ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ 90 ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ಅಂದಾಜು ಮಾಡಿಕೊಂಡಿದ್ದೇವೆ. ಹಾಗೆಯೇ, ಇಲ್ಲಿಗೆ ಬೇಕಾಗಿರತಕ್ಕಂಥ ನೀರಿನ ಸರಬರಾಜಿಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದು, ಕೊಳವೆಬಾವಿ ಮತ್ತು ಪೈಪ್‌ಲೈನ್ ವಿಸ್ತರಣೆಗಾಗಿ ಸುಮಾರು 92 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಎ.ಆರ್. ಡಬ್ಲ್ಯೂ ಎಸ್. ಯೋಜನೆ ಅಡಿಯಲ್ಲಿ ತೆಗೆದುಕೊಂಡಿರತಕ್ಕಂಥ ಮಿನಿ ವಾಟರ್ ಸ್ಕೀಂನ ಕಾಮಗಾರಿ ಮುಗಿಸುವುದಕ್ಕೆ ಇನ್ನು ಒಂದು ಕೋಟಿ ರೂಪಾಯಿ ಬೇಕಾಗುತ್ತದೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗಾಗಲೇ ಎರಡು ಕೋಟಿ ರೂಪಾಯಿ ಅಲ್ಲಿದೆ. ಈ ಒಂದು ಕುಡಿಯುವ ನೀರಿನ ಯೋಜನೆಗೆ ಅಲ್ಲಿರತಕ್ಕಂಥ ಎರಡು ಕೋಟಿ ರೂಪಾಯಿಗಳನ್ನು ಬಳಸಿಕೊಂಡ ನಂತರವೂ ಹಣ ಬೇಕಾದಲ್ಲಿ ಅಲ್ಲಿನ ವಾಸ್ತವಿಕತೆಯ ಆಧಾರದ ಮೇಲೆ ಹಣಕಾಸಿನ ನೆರವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಗಂಗಾಧರ ನಾಗೇಶ್ ಭಟ್: ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಡೆ ಕುಡಿಯುವ ನೀರಿನ ಸಮಸ್ಯೆ ಭಾರೀ ಪ್ರಮಾಣದಲ್ಲಿದೆ. ಇಷ್ಟಾದರೂ ಕೂಡ ಇದುವರೆಗೆ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ಹಣ ಬಿಡುಗಡೆ ಮಾಡದೆ ಇರುವುದಕ್ಕೆ ಕಾರಣ ಏನೆಂಬುದು ನನಗೂ ಕೂಡ ಗೊತ್ತಾಗುತ್ತಿಲ್ಲ.

ಶ್ರೀ ಶಿವಾನಂದ ನಾಯಕ್: ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಹಣ ಇದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ಈಗಾಗಲೇ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದ್ದಾರೆ. ಸಮುದ್ರದ ತೀರದಲ್ಲಿರತಕ್ಕಂಥ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ. ಇವತ್ತಿನ ದಿವಸ ಇಲ್ಲಿ ಬಾವಿ ತೋಡಿದರೂ ಕೂಡ ನೀರು ಬರುತ್ತಿಲ್ಲ. ಇವತ್ತಿನ ದಿವಸ ಇಲ್ಲಿಗೆ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡುತ್ತಿದ್ದೇನೆ. ಸರ್ಕಾರದ ಕಡೆಯಿಂದ ಇದಕ್ಕೆ ಯಾವುದೇ ರೀತಿಯ ಹಣ ಇಲ್ಲವೆಂದು ನಾವು ಅಲ್ಲಿರತಕ್ಕಂಥ ಸಂಘ ಸಂಸ್ಥೆಗಳಿಂದ ಹಣ ಸಂಗ್ರಹ ಮಾಡಿ ಅಲ್ಲಿರತಕ್ಕಂಥ ಜನರಿಗೆ ನೀರನ್ನು ಸರಬರಾಜು ಮಾಡುತ್ತಿದ್ದೇವೆ.

ಭಟ್ಕಳ್ ಬಂದರಿನಲ್ಲಿರತಕ್ಕಂಥ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಎಲ್ಲಿಯೂ ಕೂಡ ಇಲ್ಲ. ಮತ್ತೆ ಸರ್ಕಾರದ ವತಿಯಿಂದ ಕುಡಿಯುವ ನೀರಿಗೆ ಏನ್ನೊಂದು ವ್ಯವಸ್ಥೆ ಕೂಡ ಮಾಡಿಲ್ಲ.

ಉಪಾಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ. ಈಗಾಗಲೇ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ನಿಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ತಾವೇ ಪ್ರಶ್ನೆಯನ್ನು ಕೇಳಿ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳ ಆತಂಕಗಳನ್ನು ಮತ್ತು ಅವರು ಕಾಳಜಿಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡರೆ, ಮತ್ತೆ ಕುಡಿಯುವ ನೀರಿನ ಅಭಾವ ಉಂಟಾಗದ ರೀತಿಯಲ್ಲಿ ಮತ್ತು ಇದಕ್ಕೆ ಎಷ್ಟೇ ಹಣಕಾಸಿನ ನೆರವನ್ನು ನೀಡುವುದಕ್ಕೆ ಸಿದ್ಧರಿದ್ದೇವೆಂದು ಈಗಾಗಲೇ ಹಣಕಾಸಿನ ಸಚಿವರು ಹೇಳಿದ್ದಾರೆ. ರಾಜ್ಯ ಮತ್ತು ಕೇಂದ್ರ ವಲಯಗಳ ಯೋಜನೆಗಳನ್ನು ಮತ್ತು ಯಾವ್ಯಾವ ಜಿಲ್ಲೆಗಳಿಗೆ ವಿಶ್ವಬ್ಯಾಂಕ್‌ನಿಂದ ಹಣ ಬಂದಿದೆಯೋ ಅವುಗಳೆಲ್ಲವನ್ನು ಸಮರ್ಪಕವಾಗಿ ಬಳಸಿಕೊಂಡು ಕುಡಿಯುವ ನೀರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆಂಬ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹಾಗೂ ಇಲ್ಲಿರತಕ್ಕಂಥ ಎಲ್ಲಾ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಕೊನೆಯದಾಗಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಪಡೆಯನ್ನು ಸರ್ಕಾರ ರಚನೆ ಮಾಡಿದೆ. ಇದರ ಬಗ್ಗೆ ಸರ್ಕಾರದಲ್ಲಿ ನಿರ್ಧಾರವಾಗಿ ಇಷ್ಟು ದಿನಗಳಾಗಿದ್ದರೂ ಕೂಡ ಜಿಲ್ಲಾ ಪಂಚಾಯತ್ ಸಿಇಓ ರವರಿಗೆ ಇದರ ಬಗ್ಗೆ ಸೂಚನೆ ಹೋಗಿಲ್ಲ? ಮತ್ತೆ ಇದಕ್ಕೆ ಹಣ ಕೊಡಬೇಕೆಂಬುದರ ಬಗ್ಗೆಯೂ ಕೂಡ ಇನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಹಾಗೆಯೇ ಅನೇಕ ಜಿಲ್ಲಾ ಪಂಚಾಯತ್ ಸಿಇಒಗಳಿಗೆ ಶಾಸಕರ ಅಧ್ಯಕ್ಷತೆಯಲ್ಲಿ ರಚನೆ ಮಾಡಿರತಕ್ಕಂಥ ಕಾರ್ಯಪಡೆಯ ಸೂಚನೆಯೆ ಇನ್ನು ಹೋಗಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಅಭಾವದ ಮೇಲಿನ ಚರ್ಚೆ ಈಗಾಗಲೇ ರಾಜ್ಯದ ಮೂಲೆ ಮೂಲೆಗೂ ಕೂಡ ಮುಟ್ಟಿದೆ. ಮತ್ತೆ ಕುಡಿಯುವ ನೀರಿನ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕಂಥ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಿಗೆ ಈ ಸೂಚನೆ ಹೋಗಿದೆ. ಮತ್ತೆ ಟಾಸ್ಕ್‌ಫೋರ್ಸ್ ಕಮಿಟಿ ರಚನೆ ಮಾಡಿದ್ದು,

ಇದರಲ್ಲಿ ಯಾರ್ಯಾರು ಇರುತ್ತಾರೆ ಎಂಬುದನ್ನು ಈಗಾಗಲೇ ತಿಳಿಸಿದ್ದು, ಇದಕ್ಕೆ ಸಂಬಂಧಪಟ್ಟಂಥ ಆದೇಶವನ್ನು ಹೊರಡಿಸಿ ಅವರಿಗೆ ಕಳುಹಿಸಿಕೊಡುತ್ತೇವೆ. ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗೆ ಈ ಟಾಸ್ಕ್‌ಫೋರ್ಸ್ ಕಮಿಟಿ ಕಾರ್ಯೋನ್ಮುಖರಾಗುತ್ತಾರೆ. ಮತ್ತೆ ತಮ್ಮ ಅಧ್ಯಕ್ಷತೆಯಲ್ಲಿಯೇ ಈ ಕಮಿಟಿ ನಡೆಯುತ್ತದೆ. ಆದ್ದರಿಂದ, ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಆದ್ದರಿಂದ, ತಾವ್ಯಾರು ಆಂತಕ ಪಡೆದುಕೊಳ್ಳಬೇಕಾಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2854

ಸದಸ್ಯರ ಹೆಸರು : ಶ್ರೀ ಯೋಗೀಶ್ ಭಟ್ ಎನ್.

ಉತ್ತರಿಸುವ ಸಚಿವರು : ಶ್ರೀ ರಾಮಲಿಂಗಾರೆಡ್ಡಿ

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅನುದಾನಿತ ಶಾಲಾ ಶಿಕ್ಷಕರಿಗೆ ವೇತನ ಪಾವತಿಯಲ್ಲಿ ವಿಳಂಬ ಉಂಟಾಗುತ್ತಿರುವುದು ನಿಜವೇ,	ಹೌದು.
ಆ)	ನಿಜವಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು,	2004–05ನೇ ಸಾಲಿನಲ್ಲಿ ಅನು ದಾನದ ಕೊರತೆಯಿಂದಾಗಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಸಿಬ್ಬಂದಿ ವರ್ಗಕ್ಕೆ ನವೆಂಬರ್ 2004 ಮಾಹೆಯಿಂದ ವೇತನ ಪಾವತಿಯಲ್ಲಿ ವಿಳಂಬವಾಗಿತ್ತು. ಆದರೆ 31–01–2005ರಲ್ಲಿ ಸರ್ಕಾರ ದಿಂದ ಈ ಉದ್ದೇಶಕ್ಕಾಗಿ ಒಟ್ಟು ರೂ. 135.21 ಕೋಟಿಗಳ ಹೆಚ್ಚುವರಿ ಅನು ದಾನ ಬಿಡುಗಡೆ ಮಾಡಿದೆ ಹಾಗೂ ಫೆಬ್ರವರಿ 2005ರವರೆಗಿನ ವೇತನ ಪಾವತಿಗೆ ಕ್ರಮ ವಹಿಸಲಾಗಿದೆ. ಕೆಲವು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮಾತ್ರ ಫೆಬ್ರವರಿ 2005ರ ವೇತನಕ್ಕೆ ಕೊರತೆ